**ಪಾಠ 5** **ಅಕ್ಟೋಬರ್ 27 – ನವೆಂಬರ್ 2**

## ಆದಿ ಸಭೆಯಲ್ಲಿ ಐಕ್ಯತೆಯ ಅನುಭವ.



**ಸಬ್ಬತ್ತಿನ ಮದ್ಯಾಹ್ನ.**

**ಈ ವಾರ ಅಧ್ಯಾಯನಕ್ಕಾಗಿ ಓದಿರಿ – ಅ.ಕೃ 1:12–14, ಅಕೃ 2:5–13, ಪ್ರಕಟನೆ 14:12, ಅಕೃ 2:42–47, ಅಕೃ 4:32–37, ಅಕೃ 5:1–11, 2ಕೊ 9:8–15.**

**ಸ್ಮರಣ ವಾಕ್ಯ: ಇವರು ಅಪೋಸ್ತಲರ ಬೋಧನೆಯನ್ನು ಕೇಳುವದರಲ್ಲಯೂ ಸಹೋದರರ ಅನ್ಯೋನ್ಯತೆಯಲ್ಲಯೂ ರೊಟ್ಟಿ ಮುರಿಯುವದರಲ್ಲಯೂ ಪ್ರಾಥ–ರ್ನೆಗಳಲ್ಲಿಯೂ ನಿರತರಾಗಿದ್ದರು ಅ.ಕೃ 2:42**

ಸಭೆಯ ಐಕ್ಯತೆಯು ಯೇಸುವಿನೊಂದಿಗೆ ಆತ್ಮಿಕ ಅನುಭವದ ನಿಮಿತ್ತವಾಗಿದೆ ಫಲಿತಾಂಶವಾಗಿತ್ತು ಸತ್ಯವಾಗಿದ್ದ ಯೇಸುವು ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರೆತು ಯಾರು ತಂದೆಯ ಬಳಿಗೆ ಬರುವದಿಲ್ಲ. ಯೋಹಾನ 14:6. ಅನ್ಯೊನ್ಯತೆಯ ಗಟ್ಟಿಯಾದ ಬಂಧವು, ಆತ್ಮೀಕ ಪಯಣದಲ್ಲಿ ಮತ್ತು ಅನುಭವದಲ್ಲಿ ರೂಪಗೊಳ್ಳತ್ತದೆ. ಮೊದಲಿನ ಅಡ್ವೆಂಟಿಸ್ಟ್‌ರಿಗೆ ಮಿಲ್ಲರ್ ಅಂ–ದೋಲನದಲ್ಲಿ ಅಂಥ ಅನುಭವವಾಗಿತ್ತು. 1844ರಲ್ಲಿ ಇಂಥ ಒಂದು ಅನುಭವದಲ್ಲಿ ಅವರ ಮನಸ್ಸುಗಳು ಒಂದಾಗಿ ಅವರಿಗಾದ ನಿರಾಶಯಕ್ಕೆ ಕಾರಣವನ್ನು ಹುಟುಕಲು ಯೋಚಿಸಿದರು ಅಂಥ ಅನುಭವ ಸವೆಂತ್–ಡೇ–ಅಡ್ವೆಂಟಿಸ್ಟ್ ಸಭೆಯನ್ನು ಹುಟ್ಟು

ಹಾಕಿತು. ಸ್ಥಾಪಿಸಲು ಕಾರಣವಾಯಿತು, ಮತ್ತು ಮುಂದೆ ಸಂಭವಿಸುವ ತೀರ್ಪಿನ ಸತ್ಯದ ಬಗ್ಗೆ ಕಂಡುಕೊಂಡರು.

ಯೇಸು ಪರಲೋಕಕ್ಕೆ ಹೋದ ನಂತರ ಆತನ ಶಿಷ್ಯರಿಗೆ ಆದ ಅನುಭವವು ದೇವರ ವಾಕ್ಯ ಪ್ರಾರ್ಥನೆ. ಅನ್ಯೋನ್ಯತೆಯು ನಂಬುವವ ಮತ್ತು ಬೇರೆ ಬೇರೆ ಹಿನ್ನಲೆಯಲ್ಲಿ ಬಂದ ಜನರಲ್ಲಿ ಐಕ್ಯತೆಯನ್ನು ತಂದದ್ದು ಒಂದು ಸಾಕ್ಷಿಯಾಗಿದೆ. ಅಂಥ ಅನುಭವವು ಈಗಲೂ ಈ ಹೊತ್ತು ಸಾಧ್ಯವಿದೆ, ಸಮುದಾಯಕ ಆರಾಧನೆಯಲ್ಲಿ ಅನ್ಯೋನ್ಯತೆಯು ಒಂದು ಮೂಲ ವಸ್ತುವಾಗಿದೆ. ಕ್ರೈಸ್ತರಿಗೆ ಆತ್ಮಿಕ ಬಂಧದ ಅರಿವಾಗಬೇಕು ಅದು ನಂಬುವ ಬೇರೆಯುವರನ್ನು(ಅನ್ಯರನ್ನು) ಮತ್ತು ಕ್ರೈಸ್ತರನ್ನು ಯೇಸುಕ್ರೀಸ್ತನಲ್ಲಿ ಒಂದುಗೋಡಿಸುತ್ತದೆ. ಇದರ ಹೊರೆತು ಬೇರೆ ಯಾವುದೂ ಇಲ್ಲ. ಯೇಸು  ಆತ್ಮವನ್ನು ಮೊದಲು ತನ್ನ ಬಳೀಗೆ ಬರಗೂಡಿಸುತ್ತಾನೆ, ನಂತರ ನಂಬುವ ಇತರರೊಂದಿಗೆ ಸಭೆಯಲ್ಲಿ ಒಗ್ಗೂಡಿಸುತ್ತಾನೆ. ರಾಬರ್ಟ್ ಜಿ ರೆಬರ್ನ್ "ಕಮ್ ಲೆಟ್ ಹಸ್ ವರ್ಶಿಪ್" ಪು.9

**ಭನುವಾರ** **ಅಕ್ಟೋಬರ್ 28**

**ಪೂರ್ವಸಿದ್ಧತೆ ದಿನಗಳು**

ಸಾಯುವ ಮುನ್ನ ಯೇಸು ತನ್ನ ಶಿಷ್ಯರೊಂದಿಗೆ ಕಳೆದ ಕೊನೆಯ ಗಳಿಗೆಯಲ್ಲಿ ಯೇಸು ಶಿಷ್ಯರಿಗೆ ವಾಗ್ದಾನ ಮಾಡಿದನು. ಅದು ಏನೆಂದರೆ, ನಿಮ್ಮನ್ನು ನಾನು ಒಬ್ಬಂಟಿಗರನ್ನಾಗಿ ಕೈ ಬಿಡುವುದಿಲ್ಲ. ನಾನು ನಿಮಗೆ ಸಹಾಯಕನನ್ನಾಗಿ ಪವಿತ್ರಾತ್ಮನನ್ನು ನಿಮ್ಮ ಸುವಾರ್ತೆಯ ಕೆಲಸದಲ್ಲಿ ಸಹಾಯ ಮಾಡಲು ಕಳುಹಿಸುವೆನೆ. ನಿಮಗೆ ಎಲ್ಲವನ್ನೂ ಉಪದೇಶಿಸಿ ನಾನು ನಿಮಗೆ ಹೇಳಿದ್ದನೆಲ್ಲ ನಿಮ್ಮ ನೆನೆಪಿಗೆ ತರುವನು. ಯೇಸುವು ತಾನು ಪರಲೋಕಕ್ಕೆ ಏರಿ ಹೋಗುವ ದಿನ ವಾಗ್ದಾನವನ್ನು ಮತ್ತೊಂದು ಸಲ ಜ್ಞಾಪಕಮಾಡಿ ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವುದು. ಇನ್ನು ಮುಂದೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದುವಿರಿ. ಯೆರುಸಲೇಮಿನಲ್ಲಿಯೂ ಎಲ್ಲಾಯೂದಾಯ, ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು ಅಂದನು; (ಅ.ಕೃ. 1:8)

ಅ.ಕೃ 1:12–14 ಓದಿರಿ: ಹತ್ತು ದಿವಸಗಳ ಅವಧಿಯಲ್ಲಿ ಶಿಷ್ಯರು ಏನು ಮಾಡಿದರು?

——————————————————————————————

ಈ ಹತ್ತು ದಿನಗಳು ಅವರಿಗೆ ಆತ್ಮೀಕ ತಯಾರಿಯ ಅವಧಿ ಎಂದು ಊಹಿಸಿಕೊಳ್ಳಬಹದು. ಆ ಅವಧಿಯಲ್ಲಿ ಶಿಷ್ಯರು ಯೇಸುವಿನೊಡನೆಯ ನೆನೆಪುಗಳು, ಆತನ ಬೋಧನೆ, ಆತನ ಅದ್ಭುತ ಕಾರ್ಯಗಳನ್ನು ನೆನೆಪು ಮಾಡಿಕೊಂಡು ತಮ್ಮೊಳಗೆ ಹಂಚಿಕೊಂಡರು(ಅ.ಕೃ. 1:14) ಆತನ ವಾಗ್ದಾನವು ನೆರವೇರುವದಕ್ಕೆ ಕಾಯ್ದುಕೊಂಡು ಅವರು ತಗ್ಗಿದ ಸ್ವಭಾವದವರಾಗಿ ಮನಸ್ಸುಗಳಲ್ಲಿ ಪ್ರಾಯಶ್ಚಿತ್ತ ಪಟ್ಟು ಅಪನಂಬಿಗಸ್ತರೆಂದು ಒಪ್ಪಿಕೊಂಡರು. ಯೇಸು ಸಾಯುವ ಮುನ್ನ ಹೇಳಿದ ಮಾತುಗಳನ್ನು ನೆನೆಸಿಕೊಂಡು ಆ ಮಾತುಗಳ ಅರ್ಥವನ್ನು ಸಂಪೂರ್ಣ ತಿಳಿದುಕೊಂಡರು. ಸತ್ಯವು ಅವರ ನೆನೆಪಿನಲ್ಲಿ ಇಲ್ಲದೆ ಹೋಗಿ ಮತ್ತೆ ಅದು ಜ್ಞಾಪಕವಾಯಿತು. ಅದನ್ನು ತಮ್ಮೊಳಗೆ ಪುನರುಚ್ಚರಿಸಿದರು. ಅವರು ರಕ್ಷಕನನ್ನು ತಪ್ಪಾಗಿ ತಿಳಿದುಕೊಂಡದಕ್ಕೆ ತಮ್ಮನ್ನು ತಾವೇ ನಿಂದಿಸಿಕೊಂಡರು. ಮೆರವಣಿಗೆಯಂತೆ ಆತನು ಕಳೆದ ಜೀವನದ ಚಿತ್ರಣವು ಒಂದಾದ ಮೇಲೊಂದು ಅವರ ಮುಂದೆ ಸಾಗಿದವು. ಅವರು ಆತನ ಪರಿಶುದ್ಧ ಜೀವನದ ಬಗ್ಗೆ ಧ್ಯಾನ ಮಾಡುತ್ತದ್ದಂತೆ ಯಾವ ಕಷ್ಟಕರವಾದ ಕಾರ್ಯವು ಕಷ್ಟವಲ್ಲ ಎಂದು ಅವರಿಗೆ ಅನಿಸಿತು ಮತ್ತು ಸ್ಯಾಗವೂ ದೊಡ್ಡದಲ್ಲ. ಆದರೆ ಕ್ರಿಸ್ತನ ಗುಣಗಳಿಗೆ ಸಾಕ್ಷಿಗಳಾಗಿದ್ದರೆ ಅವರಿಗೆ ಎಲ್ಲವೂ ಸುಲಭವೇನಿಸುವದು ಎಂದು ಅಂದು ಕೊಂಡರು. ಕಳೆದ ಮೂರು ವರ್ಷಗಳನ್ನು ಮತ್ತೆ ಜೀವಿಸುವದಾದರೆ ಎಷ್ಟು ವ್ಯತ್ಯಾಸವಾಗಿ ಇರುತ್ತಿದ್ದರು, ಮತ್ತೆ ಯೇಸುವನ್ನು ಕಾಣುವುದಾದರೆ, ಅವರು ಎಷ್ಟು ಅಗಾಧವಾಗಿ ಪ್ರೀತಿಸುತ್ತಿದ್ದೇವೆ ಎಂಬುದನ್ನು ತೋರಿಸುತ್ತಿದ್ದರು. ಮಾತಿನಲ್ಲಾಗಲೀ ಕ್ರೀಯೆಯಲ್ಲಾಗಲೀ ಅಪನಂಬಿಕೆಯನ್ನು ತೋರಿಸಿ ಆತನನ್ನು ನೋಯಿಸಿದ್ದಕ್ಕಾಗಿ ಯಥಾರ್ಥತೆಯ ದುಃಖದಿಮದ ತುಂಬಿದರಾದರೂ. ಆದರೆ ಅವರು ಕ್ಷಮಿಸಲ್ಪಟ್ಟಿದೇವೆಂದು ತಿಳಿದುಕೊಂಡು ಸಮಾಧಾನ ಪಟ್ಟರು. ಕ್ರಿಸ್ತನನ್ನು ಅಂಗೀಕರಿಸಿಕೊಂಡು ತಮ್ಮ ಅಪನಂಬಿಕೆಗೋಸ್ಕರ ಪ್ರಾಯಶ್ಚಿತ ಪಡಲು ದೃಢವಾದರು. ಅವರ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಒದಿಗೊತ್ತಿ ಎಲ್ಲಾ ಆಸೆಗಳನ್ನು ಬಿಟ್ಟು ಅವರು ಕ್ರೈಸ್ತೀಯ ಅನ್ಯೊನ್ಯತೆಯಲ್ಲಿ ಒಂದುಗೂಡಿದರು. ಎಲೆನ್ ಜಿ ವೈಟ್, ದಿ ಆಕ್ಟ್ಸ ಆಫ ದಿ ಅಪೂಸ್ಟಲ್ಸ್. ಪು 36, 37.

**ಸೋಮವಾರ** **ಅಕ್ಟೋಬರ್ 29**

**ಬಾಬೇಲಿನಿಂದ ಪಂಚಾಶತ್ತಮದವರೆಗೆ**

ಯೇಸು ಪರಲೋಕಕ್ಕೆ ಏರಿಹೋದನಂತರ ಆತ್ಮಿಕ ಸಿದ್ದತೆಯ ದಿನಗಳು ಪಂಚಾಶತಮ ದಿನಗಳಲ್ಲಿ ಒಳಗೊಂಡಿದ್ದವು. ಮೊದಲನೇಯ ವಾಕ್ಯವು ತಿಳಿಸುವ

ಪ್ರಕಾರ ಆ ದಿನ ಪವಿತ್ರಾತ್ಮನು ಅವರಲ್ಲಿ ಬರುವ ಮುನ್ನ ಶಿಷ್ಯರೆಲ್ಲರೂ ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು(ಅ.ಕೃ 2:1). ಹಳೆಯ ಒಡಂಬಡಿಕೆಯಲ್ಲಿ ಮುಖ್ಯವಾದ ಹಬ್ಬಗಳಲ್ಲಿ ಪಂಚಾಶತ್ತಮವು ಎರಡನೇಯದಾಗಿತ್ತು. ಆ ಹಬ್ಬದಲ್ಲಿ ಇಸ್ರಾಯೇಲ್ಯರಲ್ಲಿ ಪ್ರತಿಯೊಬ್ಬ ಗಂಡಸರು ಭಾಗಿಗಳಾಗಲೇ ಬೇಕಾಗಿತ್ತು ಪಸ್ಕ ಹಬ್ಬದ ನಂತರ 50 ದಿನಗಳ ಕಾಲ ಈ ಹಬ್ಬವನ್ನು ಆಚರಿಸಲಾಗುತ್ತಿತ್ತು. ಆ ಹಬ್ಬದಲ್ಲಿ ಇಬ್ರಿಯರು ಬೇಸಿಗೆ ಸುಗ್ಗಿಉ ಪ್ರಥಮ ಫಲಗಳನ್ನು ದೇವರಿಗೆ ಕೃತಜ್ಞತೆಯ ಕಾಣಿಕೆಯಾಗಿ ಅರ್ಪಿಸುತ್ತಿದ್ದರು.

ಪಂಚಾತ್ತಮ ಹಬ್ಬದ ಸಮಯದಲ್ಲಿ ಯೇಸು ಇದ್ದ ಸಮಯದಲ್ಲಿ ಸೀನಾಯಿ ಬೆಟ್ಟದ ಮೇಲೆ ಆಜ್ಞೆಗಳು ಸಿಕ್ಕಗೋಸ್ಕರ ಆಚರಿಸುತ್ತಿದ್ದರು. ಆದುದರಿಂದ ಯೇಸುವಿನ ಬಗ್ಗೆ ಕ್ರೈಸ್ತ ಸಂದೇಶಗಳಲ್ಲಿ ಇಂದಿಗೂ ದೇವರ ಆಜ್ಞೆಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ. ಯೇಸುವಿನ ಮರಣದ ಮೂಲಕ ಪಾಪಗಳಿಗಾಗಿ ಪಶ್ಚಾತ್ತಾಪ ಪಡುವವರೆಲ್ಲರಿಗೂ ಕ್ಷಮಾಪಣೆ ಉಂಟು. ಕೊನೆಯ ದಿನಮಾನಗಳಲ್ಲಿ ಆಜ್ಞೆಗಳು ಮತ್ತು ಸುವಾರ್ತೆಯ ಬಗ್ಗೆ ತಿಳಿಸುವ ವಾಕ್ಯವು ಇಲ್ಲದೆ  “ಇದರಲ್ಲಿ ದೇವರ ಆಜ್ಞೆಗಳನ್ನು ಯೇಸುವಿನ ಮೇಲಣ ನಂಬಿಕೆಯನ್ನು ಕೈಕೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿ ಬರುತ್ತದೆ. (ಪ್ರಕಟನೆ 14:12).

ಸೀನಾಯ ಬೆಟ್ಟದ ಮೇಲೆ ಮೋಶೆಯು ದೇವರಿಂದ ಹತ್ತು ಆಜ್ಞೆಗಳನ್ನು ಸ್ವೀಕರಿಸುತ್ತಿರುವ ಗಳಿಗೆಯಲ್ಲಿ ಅನೇಕ ಆಶ್ಚರ್ಯಕರವಾದ ಸಂಗತಿಗಳು ಪಂಚಾಶತ್ತಮದ ಸಮಯದಲ್ಲಿ ನಡೆದವು, ಆಗ ಬಿರುಗಾಳಿ ಬೀಸುತ್ತದೋ ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ ಮನೆಯನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂತಿದ್ದ ನಾಲಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು ಆಗ ಅವರೆಲ್ಲರು ಪವಿತ್ರಾತ್ಮ ಭರಿತರಾಗಿ ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆ ಬೇರೆ ಭಾಷೆಗಳಿಂದ ಮಾತನಾಡುವದಕ್ಕೆ ಪ್ರಾರಂಭಿಸಿದರು (ಆ.ಕೃ. 2:2–4)

**ಅಕೃ 2:5–13 ಓದಿರಿ: ಈ ಆಶ್ಚರ್ಯವಾದ ಘಟನೆಯ ಪ್ರಾಮುಖ್ಯತೆ ಏನು?**

–––––––––––––––––––––––––––––––––––––––––––––

–––––––––––––––––––––––––––––––––––––––––––––

ಪಂಚಾಶತ್ತಮ ಹಬ್ಬವು ಉಲ್ಲಾಸ ತರುವಂತ ಹಬ್ಬವಾಗಿತ್ತು. ಯೆಹೋವನು ಮಾಡಿದ ಉಪಕಾರಗಳಿಗೋಸ್ಕರ ಆತನಿಗೆ ಕೃತಜ್ಞತೆ ಸಲ್ಲಿಸುವ ಹಬ್ಬವಾಗಿತ್ತು. ಕೆಲವರು, ಇವರು ಮದ್ಯಪಾನ ಮಾಡಿ ಮತ್ತರಾಗಿದ್ದಾರೆಂದು ಹಾಸ್ಯಮಾಡಲು

ಕಾರಣವಾಯಿತು. (ಆಕೃ 2:13–15) ಬೇರೆ ಬೇರೆ ಭಾಷೆಗಳಲ್ಲಿ ಮಾತುಗಳನ್ನು ಕೇಳುವುದು ದೇವರ ಶಕ್ತಿಯು ಈ ಅದ್ಭುತಗಳಲ್ಲಿ ಕಂಡುಬರುತ್ತಿದೆ ಯೆಹೂದ್ಯರು ರೋಮ್ ರಾಜ್ಯದ ಎಲ್ಲಾ ಕಡೆಯಿಂದಲೂ ಯೆರೂಸಲೇಮಿಗೆ ಈ ಹಬ್ಬಕ್ಕೆ ಬಂದು ಮೆಸ್ಸಿಯನಾದ ಯೇಸುವಿನ ಸಂದೇಶವನ್ನು ತಮ್ಮ ತಮ್ಮ ಭಾಷೆಗಳಲ್ಲಿ ಕೇಳುತ್ತಿದ್ದರು.

ವಿಶಿಷ್ಟವಾದ ರೀತಿಯಲ್ಲಿ ಪಂಚಾಶತ್ತಮ ಮೊಟ್ಟಮೊದಲಿನ ಮಾನವ ಕುಟುಂಬವನ್ನು ಚದುರದಂತೆ ಮತ್ತು ಬಾಬೆಲಿನ ಗೋಪುರದಲ್ಲಿ ಪ್ರಾರಂಭವಾದ ಜನಾಂಗದ ಗುಂಪನ್ನು ಮತ್ತೆ ಒಂದುಗೂಡಿಸುತ್ತಿತ್ತು. ಕೃಪೆಯ ಅದ್ಭುತದಿಂದ ಮಾನವ ಕುಟುಂಬಗಳು ಒಂದಾದವು. ಬಾಬೆಲಿನಲ್ಲಿ ಕಳೆದು ಹೋದದ್ದನ್ನು ಜಾಗತಿಕವಾಗಿ ದೇವರ ಸಭೆಯ ಐಕ್ಯತೆಯು ಆತನ ರಾಜ್ಯದ ಬಗ್ಗೆ ಸಾಕ್ಷಿಯಾಗಿದೆ.

**ಮಂಗಳವಾರ** **ಅಕ್ಟೋಬರ್ 30**

**ಅನ್ಯೋನ್ಯತೆ ಐಕ್ಯತೆ**

ಪಶ್ಚಾತ್ತಾಪ ಮತ್ತು ರಕ್ಷಣೆಯ ಬಗ್ಗೆ ಪೇತ್ರನ ಸಂದೇಶಕ್ಕೆ ಪ್ರತಿಕ್ರಿಯೆಯು ಸುಮಾರು 3000 ಜನರು ಯೇಸು ತಮ್ಮ ಮೆಸ್ಸೀಯನೆಂದು ಅಂಗೀಕರಿಸಿದರು ಅದರಿಂದಾಗಿ ಹಳೆಯ ಒಡಂಬಡಿಕೆಯಲ್ಲಿ ಇಸ್ರಾಯೇಲ್ಯರಿಗೆ ಮಾಡಿದ ವಾಗ್ದಾನವು ನೆರವೇರಿತು. ಈ ಜನರ ಹೃದಯಗಳಲ್ಲಿ ದೇವರು ಯೇಸುವಿನ ಬಗ್ಗೆ ಕೇಳಿದರು, ಹಾಗಾಗಿ ಆತನನ್ನು ಅನೇಕರು ದೂರದಿಂದ ನೋಡುವ ಭರವಸೆಯಿಂದ ಯೆರೂಸಲೇಮಿಗೆ ಬಂದಿದ್ದರು. ಅನೇಕರು ಯೇಸುವನ್ನು ನೋಡಿ ದೇವರ ರಕ್ಷಣೆಯ ಬಗ್ಗೆ ಅನೇಕ ಸಂದೇಶಗಳನ್ನು ಕೇಳಿಯು ಆತನನ್ನು ಹಿಂಬಾಲಿಸಲು ನಿರ್ಧರಿಸಿರಲಿಲ್ಲ. ಪಂಚಾಶತ್ತಮದಲ್ಲಿ ದೇವರು ಅದ್ಭುತಕರವಾಗಿ ಶಿಷ್ಯರ ಜೀವನದಲ್ಲಿ ಬಂದು ಯೇಸುವಿನ ಪುನರುತ್ಥಾನಕ್ಕೆ ಸಾಕ್ಷಿಗಳನ್ನಾಗಿ. ಅವರನ್ನು ಉಪಯೋಗಿಸಿದನು. ಯೇಸುವಿನ ಮೂಲಕ ಜನರ ಪಾಪಗಳು ಕ್ಷಮಿಸಲ್ಪಡುವವು ಎಂಬುದು ಅವರಿಗೆ ತಿಳಿಯಿತು.

**ಅ.ಕೃ 2:42–47 ಯೇಸುವಿನ ಹಿಂಬಾಲಕರು ನಂಬಿಗಸ್ತ ಸಮುದಾಯದವರಾಗಿ ಯಾವ ಚಟುವಟಿಕೆಗಳನ್ನು ಕೈಕೊಂಡರು? ಈ ಅನ್ಯೋನ್ಯತೆಯ ಐಕ್ಯತೆಗೆ ಕಾರಣವೇನು?**

____________________________________________

____________________________________________

____________________________________________

ಹೊಸ ನಂಬಿಕೆಯ ಸಮುದಾಯವು ಅಪೊಸ್ತಲರ ಬೋಧನೆಯನ್ನು ತಿಳಿದುಕೊಳ್ಳುವ ಚಟುವಟಿಕೆಯಲ್ಲಿ ನಿರತರಾಗಿದ್ದು ಗಮನಾರ್ಹವಾದದ್ದು. ಹೊಸ ನಂಬಿಗಸ್ತರಲ್ಲಿ ಆತ್ಮೀಕವಾಗಿ ಬೆಳೆಯಲು ಸತ್ಯವೇದದ ಬೋಧನೆಗಳು ಮುಖ್ಯವಾಗಿ ಅನುಕೂಲ ಮಾಡಿಕೊಡುತ್ತೇವೆ. ಯೇಸು ತನ್ನ ಶಿಷ್ಯರಿಗೆ ನಾನು ನಿಮಗೆ ಅಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದ್ದೇಶ ಮಾಡಿರಿ(ಮತ್ತಾ 28:20). ಈ ಹೊಸ ಸಮುದಾಯವು ಯೇಸುವಿನ ಬಗ್ಗೆ ಅಪೊಸ್ತಲರಿಂದ ತಿಳಿದುಕೊಳ್ಳುವಲ್ಲಿ ಸಮಯ ಕಳೆಯುತ್ತಿದ್ದರು. ಯೇಸುವಿನ ಜೀವನ, ಸೇವೆ, ಬೋಧನೆ, ಸಾಮ್ಯ ಮತ್ತು ಸಂದೇಶ ಮತ್ತು ಆತನು ಮಾಡಿದ ಅದ್ಭುತಗಳ ಬಗ್ಗೆ ತಿಳಿದು ಕೊಳ್ಳುತ್ತಿದ್ದರು. ಇಬ್ರಿಯರ ಸತ್ಯವೇದದಲ್ಲಿ ಪ್ರವಾದಿಗಳು ಬರೆದದ್ದು ನೆರವೇರಿ ತೆಂಬುದನ್ನು ಇಲ್ಲಿ ವಿವರಿಸಲಾಗಿದೆ

ಅವರು ಪ್ರಾರ್ಥನೆಯಲ್ಲಿ ಕಾಲ ಕಳೆಯಯುತ್ತಿದ್ದರು ಮತ್ತು ರೊಟ್ಟಿ ಮು–ರಿಯುತ್ತಿದ್ದರು. ರೊಟ್ಟಿ ಮುರಿಯುವದು ಕರ್ತನ ರಾತ್ರಿ ಭೋಜನೆ ಪ್ರತೀಕವಾಗಿದೆ ಎಂಬುದರ ಬಗ್ಗೆ ಸ್ಪಷ್ಟತೆ ಇಲ್ಲ, ಅಥವಾ ರೊಟ್ಟಿ ಮುರಿದ ಎಲ್ಲರೂ ಸೇರಿ ಆಹಾರ ಸೇವಿಸುವದಕ್ಕೆ ಸಂಬಂಧಿಸಿದೆ ಎಂಬುದು ಸ್ಪಷ್ಟವಾಗಿಲ್ಲ (ಅ.ಕೃ 2:46). ಅನ್ಯೋನ್ಯತೆಯು ಈ ಹೊಸ ಸಮುದಾಯದವರು ಜೊತೆಯಾಗಿ ಸಮಯ ಕಳೆಯುತ್ತಿದ್ದರು. ಆಗಾಗ ಯೆರೂಸಲೇಮಿನ ದೇವಾಲಯದಲ್ಲಿ ತಮ್ಮ ಮನೆಗಳಲ್ಲಿ ಸೇರುತ್ತಿದ್ದರು ಅವರು ಹತ್ತಿರವಾಗಿ ಇದ್ದರು. ಅವರು ಜೊತೆಯಲ್ಲಿ ಊಟಮಾಡಿ ಪ್ರಾರ್ಥಿಸುತ್ತಿದ್ದರು. ನಂಬಿಗಸ್ತ ಸಮುದಾಯದ ಜನರಿಗೆ ಪ್ರಾರ್ಥನೆಯು ಬಹು ಮುಖ್ಯವಾಗಿತ್ತು. ಅದು ಅವರ ಆತ್ಮೀಕ ಬೆಳೆವಣಿಗೆ ಅತ್ಯಾವಶ್ಯಕವಾಗಿತ್ತು. ಈ ಹೊಸ ಸಮುದಾಯವು ಪ್ರಾರ್ಥನೆ ಮತ್ತು ಆರಾಧನೆಯಲ್ಲಿ ಸಮಯ ಕಳೆಯುತ್ತಿದ್ದರು. ಈ ಚಟುವಟಿ–ಕೆಗಳಲ್ಲಿ ದೃಢವಾಗಿದ್ದರು. ಈ ದೃಢವಾದ ಅನ್ಯೋನ್ಯತೆಯು ಯೆರುಸಲೇಮಿನ ಬೇರೆ ಜನರೊಂದಿಗೆ ಒಳ್ಳೆ ಸಂಬಂಧಗಳನ್ನು ಬೆಳೆಸಲು ಸಹಾಯಕವಾಯಿತು.

ಈ ಹೊಸ ನಂಬಿಗಸ್ತರು ಜನರೆಲ್ಲರ ದಯೆವನ್ನು ಹೊಂದಿದರು(ಅ.ಕೃ 2:47). ಅವರಲ್ಲಿ ಯೇಸು ಮೆಸ್ಸೀಯನೆಂಬಸತ್ಯಕ್ಕೆ ಸಾಕ್ಷಿಯಾಗಿ ಅವರ ಸುತ್ತ ಮುತ್ತಲು ಇದ್ದ ಜನರಲ್ಲಿ ಬಲವಾದ ಪರಿಣಾಮ ಬೀರಿದರು. ಆದುದರಿಂದ ಪವಿತ್ರಾತ್ಮನು ಇವರ ಜೀವನದಲ್ಲಿ ಕೆಲಸ ಮಾಡಿರುವದಕ್ಕೆ ಯಾವ ಸಂಶಯವೂ ಇಲ್ಲ.

**ಇಲ್ಲಿ ಉದಾಹರಣೆಯಾಗಿರುವ ಐಕ್ಯತೆ, ಅನೋನ್ಯತೆ ಮತ್ತು ಸಾಕ್ಷಿಯ ಬಗ್ಗೆ ನಿಮ್ಮ ಸ್ಥಳೀಯ ಸಭೆಯು ಏನನ್ನು ಕಲಿಯಬಹುದು?**

**ಉದಾರತೆ ಮತ್ತು ದುರಾಸೆ.**

ಯೇಸುವಿನ ಹಿಂಬಾಲಕರು ಅನ್ಯೋನ್ಯತೆಯಿಂದ ಇದ್ದ ಕಾರಣ ಪಂಚಾಶತ್ತಮವಾದ ನಂತರ ಜನರು ಒಬ್ಬರಿಗೊಬ್ಬರು ಪರಸ್ಪರ ಬೆಂಬಲ ನೀಡುತ್ತಿದ್ದರು ಎಂದು ಲೂಕನು ಹೇಳುತ್ತಾನೆ. ನಂಬಿದವರೆಲ್ಲರು ಒಗ್ಗಟ್ಟಾಗಿದ್ದು ತಮ್ಮದೆಲ್ಲವನ್ನೂ ಹುದುವಾಗಿ ಅನುಭೋಗಿಸುತ್ತಾ ತಮ್ಮ ತಮ್ಮ ಚಿರಾಸ್ಥಿರ ಸೊತ್ತುಗಳನ್ನು ಮಾರಿ ಬಂದ ಹಣವನ್ನು ಎಲ್ಲರಿಗೂ ಅವರವರ ಅಗತ್ಯವಿದ ಹಾಗೆ ಹಂಚಿಕೊಡುತ್ತಾ ಇದ್ದರು (ಅ.ಕೃ 2:44–45).

ಸಾಮಾನ್ಯ ಸರಕುಗಳನ್ನು ಹಂಚುವದು ಸಮುದಾಯದವರಿಗೆ ಅಗತ್ಯವಿರಲಿಲ್ಲ ಅವರು ಅನ್ಯೋನ್ಯತೆಯಿದ್ದ ಕಾರಣ ಅವರ ಮಧ್ಯೆ ಪ್ರೀತಿ ಹುಟ್ಟಿತು. ಹಾಗಾಗಿ ಯಾರ ಒತ್ತಾಯವಿಲ್ಲದೆ ಪರಸ್ಪರ ಸಹಾಯ ಮಾಡುತ್ತಿದ್ದರು. ಇದು ಅವರ ಐಕ್ಯತೆಯನ್ನು ಬಿಂಬಿಸುತ್ತಿತ್ತು. ಅವರ ಪರಸ್ಪ ಬೆಂಬಲ ನೀಡುವುದರ ಕೆಲಕಾಲ ಮುಂದುವರಿಯಿತು ಅ.ಕೃ 4 ಮತ್ತು 5ನೇ ಅಧಾಯದಲ್ಲಿ ಹೆಚ್ಚು ವಿವರವೂ ನಮಗೆ ನೀಡಲಾಗಿದೆ. ಹೊಸ ಒಡಂಬಡಿಕೆಯಲ್ಲಿ ಹಲವು ಕಡೆ ಈ ವಿಷಯದನ್ನು ನಾವು ಓದಬಹುದು.

ಈ ವಿಷಯವಾಗಿ ಬಾರ್ನಬನನ್ನು ಮೊದಲನೇ ಸಲ ಪರಿಚಯಿಸಲಾಗಿದೆ. ಅವನು ಆಸ್ತಿವಂತನಾಗಿದ್ದು, ಮತ್ತು ಜಮೀನ್ದಾರನಾಗಿದ್ದನು. ಸಮುದಾಯದ ಒಳಿತಿಗಾಗಿ ತನ್ನ ಆಸ್ತಿಯನ್ನೆಲ್ಲ ಮಾರಿ ಅಪೊಸ್ತಲರಿಗೆ ಹಣ ತಂದುಕೊಟ್ಟನು (ಅ.ಕೃ 4:36–37) ಹಿಂಬಾಲಿಸಲು ಬಾರ್ನಬನನ್ನು ಉದಾರಣೆಯಾಗಿ ತೆಗೆದು ಕೊಳ್ಳುತ್ತಾರೆ.

**ಅಕೃ 4:32–37 ಓದಿರಿ: ಬಾರ್ನಬನ ನಡೆತೆ ಮತ್ತು ಮನೊವೃತ್ತಿಯನ್ನು ಅನನೀಯ ಮತ್ತು ಸೆಫೈರ್‌ಳಿಗೆ ಹೋಲಿಕೆ ಮಾಡಿರಿ. ಈ ಜೋಡಿಯ ಮಧ್ಯೆ ಏನು ತಪ್ಪು ನಡೆಯಿತು?**

———————————————————————————

———————————————————————————

———————————————————————————

ಪವಿತ್ರಾತ್ಮನಿಗೆ ನೇರವಾಗಿ ಸುಳ್ಳು ಹೇಳಿದ ಪಾಪವಲ್ಲದೆ ಅವರು ದುರಾಸೆ ಉಳ್ಳವರೆಂದು ತೋರಿಸಿದರು. ಸ್ವಾರ್ಥ ಮತ್ತು ದುರಾಸೆ, ಅನ್ಯೊನ್ಯತೆಯನ್ನು, ಸಹೋದರ ಪ್ರೀತಿಯನ್ನು ನಾಶ ಮಾಡಿದಷ್ಟು ಬೇರೆ ಯಾವ ಪಾಪವು ನಾಶ ಮಾಡಲಾರದು. ಈ

ಸಭೆಯ ಅನ್ಯೋನ್ಯತೆಯ ಸಕಾರಾತ್ಮಕವಾದ ಉದಾರಣೆ ಬಾರ್ನಬನದಾರೆ ಅನನೀಯ ಮತ್ತು ಸಫೈರಳು ಅದರ ವಿರುದ್ದವಾದ ಉದಾರಣೆಯಾಗಿದ್ದಾರೆ ಸಮುದಾಯದಲ್ಲಿ ಸದ್ಗುಣವಿಲ್ಲದ ಜನರ ಕಥೆಯನ್ನು ಲೂಕನು ಪ್ರಾಮಾಣಿಕವಾಗಿ ಹಂಚಿಕೊಂಡಿದ್ದಾನೆ.

ಹತ್ತು ಆಜ್ಞೆಗಳಲ್ಲಿ (ವಿಮೋ 20:1–17) ಕೊನೆಯ ಆಜ್ಞೆಯು ದುರಾಸೆಯ ಬಗ್ಗೆ  ಇದೆ, ಉಳಿದ ಆಜ್ಞೆಗಳಂತೆ ಈ ಆಜ್ಞೆಯು ಇಲ್ಲ, ಮೊದಲು ಒಂಬತ್ತು ಆಜ್ಞೆಗಳು ಕೃತ್ಯಗಳ ಬಗ್ಗೆ ಹೇಳುತ್ತದೆ. ಆದರೆ ಕೊನೆಯ ಆಜ್ಞೆಯು ಹೃದಯದಲ್ಲಿ ಮುಚ್ಚಿಟ್ಟ ಆಸೆಗಳ ಬಗ್ಗೆ ಇದೆ. ದುರಾಸೆ ಎಂಬ ಪಾಪವು ಕ್ರಿಯೆ ಅಲ್ಲ, ಆದರೆ ಮನಸ್ಸಿನ ಆಲೋಚನೆಯಾಗಿದೆ. ದುರಾಸೆ ಮತ್ತು ಅದರ ಜೊತೆ ಸ್ವಾರ್ಥವು ಕಣ್ಣಿಗೆ ಕಾಣುವ ಪಾಪವಲ್ಲ. ಅದು ಮಾನವ ಪಾಪದ ಸ್ವಭಾವ. ಅದು ಸ್ವಾರ್ಥ ಕ್ರಿಯೆಯಲ್ಲಿ ನಮಗೆ ಕಾಣಿಸುತ್ತದೆ, ಅದನ್ನು ನಾವು ಅನನೀಯ ಮತ್ತು ಸಫೈರಳಲ್ಲಿ ಕಾಣಬಹುದು. ಕೊನೆಯ ಆಜ್ಞೆಯು ದುರಾಸೆಯು ಅವರನ್ನು ಸೈತಾನನಿಗೆ ಅಧೀನರಾಗಿ ಮಾಡಿತು. ಅವನು ಅವರನ್ನು ದೇವರಿಗೆ ಸುಳ್ಳು ಹೇಳುವಂತೆ ಪ್ರೇರೇಪಿಸಿತು.

**ನಮ್ಮಲ್ಲಿರುವ ದುರಾಸೆಗಳನ್ನು ನಮ್ಮಿಂದ ಬೇರುಸಹಿತ ತೆಗೆದು ಹಾಕಲು ಯಾವ ವಿಧಾನಗಳನ್ನು ಹುಡುಕಬೇಕು.**

**ಗುರುವಾರ** **ನವೆಂಬರ್** 1

**ಬಡವರನ್ನು ಜ್ಞಾಪಿಸಿಕೊಳ್ಳಿ**

ಆದಿ ಸಭೆಯವರು ತಮ್ಮಲ್ಲಿ ಇದ್ದುದನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವುದು ಅವರ ಐಕ್ಯತೆಯ ಪ್ರತೀಕವಾಗಿತ್ತು. ಅದರ ಉದಾರತೆ ಬಗ್ಗೆ ಅ.ಕೃ ಪುಸ್ತಕದಲ್ಲಿ ಮೊದಲ ಅಧ್ಯಾಯಗಳಲ್ಲಿ ವಿಶ್ಲೇಸಿಸಲಾಗಿದೆ ಅದು ಮುಂದುವರಿದು ಪೌಲನು ಸ್ಥಾಪಿಸಿದ ಮೆಸಿಡೊನಿಯ ಮತ್ತು ಅಕಾಯ ಸಭೆಯ ಯೆರೂಸಲೇಮಿನ ಬಡವರಿಗಾಗಿ ಧನಸಹಾಯ ಮಾಡಿರಿ ಎಂದು ಪೌಲನು ಅವರನ್ನು ಆಹ್ವಾನಿಸುತ್ತಾನೆ. (ಅ.ಕೃ 11:27–30, ಗಲಾ 2:10, ರೋಮ 15:26 1ಕೊ 16:1–4). ಆ ಸಭೆಗಳಲ್ಲಿ ಹೆಚ್ಚಾಗಿ ನಂಬುವ ಅನ್ಯಜನರೇ ಇದ್ದರು. ಅವರು ಯೆರೂಸಲೇಮಿನ ಯೆಹೂದ್ಯ ಸಹೋದರ ಮತ್ತು ಸಹೋದರಿಯರನ್ನು ಕಾಳಜಿಯಿಂದ ನೋಡಿಕೊಂಡು ಪ್ರೀತಿ ತೋರುತ್ತಿದ್ದರು. ಅವರ ಸಂಪ್ರದಾಯಗಳು ಬೇರೆ ಬೇರೆಯಾಗಿದ್ದರೂ ಅವರು ಕ್ರಿಸ್ತನಲ್ಲಿ ಒಂದಾಗಿದ್ದಾರೆ. ಅವರು ಒಂದಾಗಿ ಸುವಾರ್ತೆಯನ್ನು ಕೇಳುತ್ತಿದ್ದರು. ಇಲ್ಲದವರೊಂದಿಗೆ ಹೀಗೆ ಹಂಚಿಕೊಳ್ಳುವ ಮೂಲಕ ಸಭೆಯ ಐಕ್ಯತೆಯನ್ನು ಬಲಪಡಿಸುತ್ತದೆ.

**2 ಕೊರಿ 9:8–15 ಓದಿರಿ. ಕೊರಿಂಥ ಸಭೆಯು ತೋರಿದ ಉದಾರತೆಯ ಫಲದ ಬಗ್ಗೆ ಪೌಲನು ಏನು ಹೇಳುತ್ತಾನೆ?**

________________________________________________

________________________________________________

________________________________________________

ಆದಿ ಸಭೆಯ ಐಕ್ಯತೆಯು ನಮಗೆ ಈಗಲೂ ನಾವು ಏನು ಮಾಡಬಹುದೆಂದು ತೋರಿಸುತ್ತದೆ. ನಂಬುವ ಜನರ ಉದ್ದೇಶಪೂರ್ವಕ ಬದ್ದತೆಯಿಂದ ಐಕ್ಯತೆಯಿಂದ ಇದ್ದರು. ಆದಿ ಸಮುದಾಯದ ನಾಯಕರು ಕ್ರಿಸ್ತನಲ್ಲಿ ಐಕ್ಯತೆಯನ್ನು ಬೆಳೆಸಲು ಸೇವೆಯೆಂದು ತಿಳಿದರು. ಗಂಡ ಹೆಂಡತಿ ಮತ್ತು ಮಕ್ಕಳ ಮಧ್ಯೆ ಪ್ರೀತಿ ಪ್ರತಿ ದಿನವು ಬೆಳೆಸಲು ಬದ್ದರಾಗಿದ್ದಾರೆ. ಕ್ರಿಸ್ತನಲ್ಲಿ ನಮ್ಮ ಐಕ್ಯತೆಯು ಪ್ರೇರೇಪಣೆಯಾಗಿ ಅನೇಕ ರೀತಿಯಲ್ಲಿ ಎದ್ದು ಕಾಣಿಸುತ್ತದೆ.

ದೇವರ ವಾಕ್ಯದ ಅಧ್ಯಾಯನ, ಪ್ರಾರ್ಥನೆ ಒಂದೇ ದೃಷ್ಟಿ, ಐಕ್ಯತೆ ಮತ್ತು ಆರಾಧನೆಯ ಅನ್ಯೋನ್ಯತೆ ಆದಿ ಸಭೆಯಲ್ಲಿ ಐಕ್ಯತೆ ಬೆಳೆಯಲು ಕಾರಣವಾದವು. ಎಲ್ಲ ದೇಶಗಳಿಗೆ ಸುವಾರ್ತೆಯನ್ನು ಸಾರುವುದು ಅವರ ಗುರಿಯಾಗಿತ್ತು, ಮತ್ತು ಬೇರೆಯವರ ಕಾಳಜಿ ವಹಿಸಿಕೊಂಡು ಪ್ರೀತಿ ಮಾಡುವ ಜವಬ್ದಾರಿಯ ಅರಿವು ಅವರಿಗಾಯಿತು. ಸ್ಥಳಿಯ ಅನ್ಯೋನ್ಯತೆಯಲ್ಲಿ ಅವರ ಉದಾರತೆ ಮತ್ತು ಪರಸ್ಪರ ಬೆಂಬಲವು ಅವರಲ್ಲಿ ಎದ್ದು ಕಾಣುತ್ತದೆ. ಸಭೆಯ ಸಮುದಾಯಗಳು ದೂರವಿದ್ದರೂ ಅವರ ಮಧ್ಯೆ ಉದ್ದಾತ್ತ ಮನಸ್ಸಿನವರಾಗಿದ್ದರು.

ಅವರು ಸ್ವೀಕರಿಸಿದ ದೇವರ ಕೃಪೆಯು ವ್ಯರ್ಥವಲ್ಲ ಎಂಬುದಕ್ಕೆ ಅವರ ಔದಾರ್ಯತೆ ಸಾಕ್ಷಿಯಾಗಿದೆ. ಆತ್ಮ ಶುದ್ಧತೆ ಅಲ್ಲದೆ ಬೇರೆಯಾವುದು ಅವರಲ್ಲಿ ಪರೋಪಕಾರಗುಣಗಳನ್ನು ಹುಟ್ಟಿಸಿದ್ದು? ನಂಬುವವರ ಮತ್ತು ಅಪನಂಬಿಗಸ್ತರ ಕಣ್ಣುಗಳಲ್ಲಿ ಅದು ಕೃಪೆಯಿಂದಾದ ಅದ್ಭುತದಂತೆ ಕಂಡಿತು. ಎಲ್ಲೆನ್ ಜಿ ವೈಟ್, ದಿ ಆಕ್ಟ್ಸ್ ಆಫ್ ಅಪೊಸ್ಟಲ್ಸ್. ಪು.344

**ಈ ಮಾಡಿದ ಪರೋಪಕಾರದ ಫಲವನ್ನು ನೀವು ಮತ್ತು ನಿಮ್ಮ ಸಭೆಯು ಯಾವ ರೀತಿಯಲ್ಲಿ ಅನುಭವಿಸಿದ್ದಿರಿ? ಬೇರೆಯವರಿಗೆ ಕೊಡುವುದರ ಫಲವಾಗಿ ಕೊಡುವವರಿಗೆ ಯಾವ ಆಶೀರ್ವಾದಗಳು ಸಿಗುವುವು?**

**ಶುಕ್ರವಾರ** **ನವೆಂಬರ್ 2**

**ಎಲೆನ್ ಜಿ ವೈಟ್ "ಪಂಚಾಶತ್ತಮ" ಪು 35–46, ದಿ ಆಕ್ಟ್ಸ್ ಆಫ್ ಅಪೊಸ್ಟಲ್ಸ್. ಪವಿತ್ರಾತ್ಮನು ಅವರಲ್ಲಿ ನೆಲಗೊಂಡಿದ್ದ ಫಲವೇ ಪರೋಪಕಾರಿ ಗುಣಗಳು ನಂಬಿಗಸ್ಥರಲ್ಲಿ ಇದ್ದವು (ಅ.ಕೃ 2:44,45 ಮತ್ತು 4:32–35).**

ಸುವಾರ್ತೆ ಮೂಲಕ ಪರಿವರ್ತ ಹೊಂದಿದವರು ಒಂದೇ ಮನಸ್ಸುಳ್ಳವರಾಗಿ. ಒಂದೇ ಆತ್ಮವುಳ್ಳವರಾಗಿ ಒಂದೇ ಆಸಕ್ತಿಯು ಇದ್ದವರಾಗಿದ್ದ ಕಾರಣ ಅವರಿಗೆ ಕೊಟ್ಟ ಕೆಲಸವು ಯಶಸ್ವಿಯಾಗುತ್ತಿತ್ತು. ಅವರ ಮನಸ್ಸಿನಲ್ಲಿ ದುರಾಸೆಗೆ ಜಾಗವೇ ಇರಲಿಲ್ಲ. ಆಸ್ತಿ ಅಥವಾ ಹಣದ ಮೇಲಿನ ಪ್ರೀತಿಗಿಂತ ಸಹೋದರ ಪ್ರೀತಿಯು ಅವರಿಗೆ ಮಿಗಿತ್ತು. ಲೌಕಿಕ ಆಸ್ತಿಯ ಮೌಲ್ಯಕಿಂತ ಆತ್ಮಗಳ ಮೌಲ್ಯಕ್ಕೆ ಹೆಚ್ಚು ಪ್ರಾಧ್ಯಾನ್ಯತೆ ಕೊಡುತ್ತಿದ್ದರು ಎಂಬುದಕ್ಕೆ ಅವರ ಕೆಲಸಗಳು ಸಾಕ್ಷಿಯಾಗಿವೆ.

ನಮ್ಮ ಜೀವನವನ್ನು ದೇವರ ಆತ್ಮವು ತನ್ನ ವಶಕ್ಕೆ ತೆಗೆದುಕೊಂಡರೆ ನಮ್ಮಲ್ಲಯೂ ಒಳ್ಳೇ ಗುಣಗಳು ಬರುವವು. ನಮ್ಮಲ್ಲಿ ಹೃದಯಗಳಲ್ಲಿ ಯೇಸುವಿನ ಮೇಲೆ ಪ್ರೀತಿ ಇದ್ದರೆ ಆತನಂತೆ ನಾವು ಜೀವಿಸುತ್ತೇವೆ ಆತನು ನಮಗೋಸ್ಕರ ಬಡವನಾದನು, ಆತನ ಬಡತನ ಮೂಲಕ ನಾವು ಶ್ರೀಮಂತರಾಗ ಬೇಕೆಂಬುದಾಗಿ. ದೇವರಿಂದ ನಾವು ಪಡೆದ ಎಲ್ಲಾ ವರದಾನಗಳಾದ ಹಣ, ಸಮಯವನ್ನು ಅವರು ಸುವಾರ್ತೆ ಕೆಲಸಕ್ಕೆಂದೇ ಉಪಯೋಗಿಸುತ್ತಿದ್ದರು ಹೀಗೆ ಅದಿ ಸಭೆಯಲ್ಲಿ ನಡೆಯುತ್ತಿತು. ಆದರೆ ಈಗಿನ ಸಭೆಯ ಸಭಿಕರ ಪವಿತ್ರಾತ್ಮನ ಶಕ್ತಿಯ ಮೂಲಕ ಲೌಕಿಕವಾದ ವಸ್ತುಗಳ ಮೇಲಿನ ಆಸೆಯನ್ನು ತೆಗೆದು ಹಾಕಲ್ಪಟ್ಟಿದೆ ಆದುದರಿಂದ ಅವರು ಬೇರೆಯವರು ಸುವಾರ್ತೆಯನ್ನು ಕೇಳಲಿ ಎಂದು ತ್ಯಾಗ ಮಾಡುತ್ತಾರೆ ಮತ್ತು ತಿಳಿಸಿದ ಸತ್ಯವು ಕೇಳುವವರ ಮೇಲೆ ಬಲವಾದ ಪ್ರಭಾವ ಬೀರುವದು.

**ಚರ್ಚೆಯ ಪ್ರಶ್ನೆಗಳು.**

1. ಆದಿ ಸಭೆಯು ಅನಿಭವಿಸಿದ ಐಕ್ಯತೆಗೆ ಕಾರಣ ಅಂಶಗಳನ್ನು ಈ ವಾರದ ಪಾಠದಲ್ಲಿ ಮತ್ತೆ ಓದಿರಿ. ಈ ದಿನ ಸಭೆಯಾಗಿ ನಾವು ಆದಿ ಸಭೆಯವರಂತೆ ಹೇಗೆ ನಡೆದು ಕೊಳ್ಳಬಹುದು? ಆದಿ ಸಭೆಯವರಲ್ಲಿ ಇದ್ದ ಗುಣಗಳಲ್ಲಿ ನಮ್ಮಲ್ಲಿ ಯಾವ ಗುಣಗಳ ಕೊರತೆ ಇದೆ?

2. ಯೆರೂಸಲೇಮಿನ ಬಡವರಿಗೋಸ್ಕರ ಉದಾರವಾಗಿ ಆದಿ ಹೊಸ ಒಡಂಬಡಿಕೆ ಸಭೆಗಳು ಕೊಟ್ಟ ಕಾಣಿಕೆಯು ಉದಾಹರಣೆಯು ಈ ದಿನ ನಾವು ಏನು ಮಾಡಬೇಕಾಗಿದೆ ಎಂದು ಸೂಚಿಸುತ್ತದೆ. ಸಮಾಜದ ಬೇರೆ ಸಮಸ್ಯಗಳನ್ನು ಹೇಗೆ ಬಗೆಹರಿಸ ಬಹುದು? ಸ್ಥಳಿಯ ಸಭೆಯು ಸಮುದಾಯದಲ್ಲಿ ಸಕ್ರಿಯವಾಗಿ ಹೇಗೆ ಬಡತನವನ್ನು ನಿರ್ಮೂಲ ಮಾಡಿ ಅವರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬಹುದು?

3. ಅನನೀಯ ಮತ್ತು ಸಫೈರಳ ಕಥೆಯ ಮೂಲಕ ನಾವು ಯಾವ ಪಾಠಗಳನ್ನು ಕಲಿಯಬಹುದು? ಅ.ಕೃ 5:5 ಮತ್ತು 5:11ರಲ್ಲಿ ಇರುವ ಪದ “ಮಹಾ ಭಯ” ಸಬೆಯಲ್ಲಿ ಮೇಲೆ ಆ ಎರಡು ಸಾವುಗಳು ಬೀರಿದ ಪರಿಣಾಮದ ಪ್ರಾಮುಖ್ಯತೆ ಏನು?

**ಸಾರಾಂಶ**: ಪವಿತ್ರಾತ್ಮ ತಮ್ಮಲ್ಲಿ ನೆಲಸಲು ಬರಮಾಡಿಕೊಳ್ಳುವುದಕ್ಕೆ ಯೇಸುವಿನ ಶಿಷ್ಯರು ಸಿದ್ದಪಡಿಸಿಕೊಳ್ಳುತ್ತಿದ್ದ ಕಾರಣ ಆದಿ ಸಭೆಗಳು ಬೇಗನೆ ಬೆಳೆದವು. ಅವರಲ್ಲಿದ್ದ ಅನ್ಯೋನ್ಯತೆಯು ಒಂದೇ ನಂಬಿಕೆಯನ್ನು ಪವಿತ್ರಾತ್ಮನು ಉಪಯೋಗಿಸಿ ಅವರ ಹೃದಯವನ್ನು ಪಂಚಾಶತ್ತಮಕ್ಕೆ ಸಿದ್ದ ಪಡಿಸಿದನು. ಪಂಚಾಶತ್ತಮದ ನಂತರವೂ ಆ ಪವಿತ್ರಾತ್ಮನು ಅವರಲ್ಲಿ ನೆಲೆಗೊಂಡು ಹೊಸ ಸಮುದಾಯವನ್ನು ಪರಿವರ್ತಿಸಿತು. ಆದಕಾರಣ ಅವರ ಉದಾರತ ಮತ್ತು ಬೆಳೆಯುತಿದ್ದ ಸಭೆಗಳು ಸಾಕ್ಷಿಗಳಾವೆ.